ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 5, MAR-APR 2021, 8-16
©*IIMRD*, Mysuru
IIMRD JOURNALS

www.iimrd.com

# ಮೈಸೂರು ಆಡಳಿತ ವಿಕೇಂದ್ರಿಕರಣದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರ ಪಾತ್ರ

ಡಾ. ನೀಲಕಂಠಸ್ವಾಮಿ ಮಾಂಬಳ್ಳಿ[1]

**ಪೀಠಿಕೆ**

ನಾಲ್ವಡಿರವರು ಚಿಕ್ಕ ವಯಸ್ಸಿನಲ್ಲಿ ರಾಜ್ಯಾಧಿಕಾರ ವಹಿಸಿಕೊಂಡವರು. ಇವರ ಆಳ್ವಿಕೆಯಲ್ಲಿ ಮೈಸೂರು ರಾಜ್ಯ ಸರ್ವತೋಮುಖ ಪ್ರಗತಿ ಸಾಧಿಸಿ 'ಮಾದರಿ ಸಂಸ್ಥಾನ' ಎಂಬ ಕೀರ್ತಿ ಹೊಂದಿತು. ಕೃಷ್ಣರಾಜ ಒಡೆಯರ್‌ರವರು ಪ್ರಜಾಪ್ರತಿನಿಧಿ ಸಭೆ, ನ್ಯಾಯ ವಿಧೇಯಕ ಸಭೆಗಳನ್ನು ಸ್ಥಾಪಿಸಿ ಆ ಮೂಲಕ ರಾಜ್ಯದ ಆಡಳಿತದಲ್ಲಿ ಪ್ರಜಾಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಅವಕಾಶ ಒದಗಿಸಿದರು ಹಾಗಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಅಧಿಕಾರವಧಿಯನ್ನು 'ಸುವರ್ಣಯುಗ'ವೆಂದು ಕರೆಯಬಹುದು. 'ರಾಜರ್ಷಿ' ಎಂಬ ಬಿರುದಿಗೆ ಪಾತ್ರವಾಗಿದ್ದ ನಾಲ್ವಡಿಯವರು ತಮ್ಮ ಜೀವನವನ್ನು ಪ್ರಜೆಗಳ ಕಲ್ಯಾಣಕ್ಕಾಗಿ ಮುಡಿಪಾಗಿಟ್ಟರು. ನಾಲ್ವಡಿಯವರು ತಮ್ಮ ದೂರದೃಷ್ಟಿ ಮತ್ತು ಸಮರ್ಥ ಆಡಳಿತದಿಂದ ಮೈಸೂರು ರಾಜ್ಯವನ್ನು ಅಭಿವೃದ್ಧಿಗೊಳಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಪ್ರಜಾಪ್ರತಿನಿಧಿ ಸಭೆಯ ಉಪಯುಕ್ತತೆ, ಸಭೆಯ ರಚನೆ, ಚುನಾಯಿತ ವಿಧಾನಗಳು, ಅದರ ಕಾರ್ಯಕಲಾಪಗಳ ಕುರಿತು ಚರ್ಚಿಸಿ ಸಭೆಯ ಸಲಹೆ ಪಡೆದು ಪ್ರಜೆಗಳಿಗೆ ವಿಶೇಷ ಹಕ್ಕು ಮತ್ತು ಪ್ರಾತಿನಿಧ್ಯವನ್ನು ನೀಡಲು ತಿರ್ಮಾನಿಸಿದರು.

ಮೈಸೂರು ಸಂಸ್ಥಾನ ಪರೋಕ್ಷವಾಗಿ ಬ್ರಿಟಿಷ್ ಆಳ್ವಿಕೆಗೆ ಒಳಪಟ್ಟಿದ್ದರೂ ಕೂಡ ಒಳಾಡಳಿತವೆಲ್ಲವು ಇವರ ಹೆಸರಿನಲ್ಲಿ ನಡೆಯುತ್ತಿತ್ತು. ಒಳಾಡಳಿತದಲ್ಲಿ ಮಹಾರಾಜರ ಅಧಿಕಾರಕ್ಕೆ ಅಡ್ಡಿಯಿರಲ್ಲಿಲ್ಲ. ಸಕಲ ಅಧಿಕಾರಿಗಳನ್ನು, ನ್ಯಾಯಮೂರ್ತಿಗಳನ್ನು ನೇಮಕ ಮಾಡುವ ಮತ್ತು ಕಾನೂನುಗಳನ್ನು ಜಾರಿಗೆ ತರುವ ಅಧಿಕಾರ ಅವರದಾಗಿತ್ತು. ಸರ್ಕಾರದ ಹಣವನ್ನು ತಮ್ಮ ಸ್ವಂತಕ್ಕಾಗಿ ಉಪಯೋಗಿಸುತ್ತಿರಲಿಲ್ಲ. ಪ್ರಜೆಗಳ ಹಣವನ್ನು ಪ್ರಜಾ ಕಲ್ಯಾಣಕ್ಕಾಗಿ ವಿನಿಯೋಗಿಸಿದ ಮೇರು ವ್ಯಕ್ತಿತ್ವದ ರಾಜರಾಗಿದ್ದರು. ಇವರ ಅಧಿಕಾರವಧಿಯಲ್ಲಿ ಪ್ರಜಾಪ್ರತಿನಿಧಿಸಭೆಯ ಬೆಳವಣಿಗೆ, ಆದ ಬದಲಾವಣೆಗಳು, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳ ರಚನೆ, ಆಡಳಿತದ ಅಭಿವೃದ್ಧಿ ಮುಂತಾದ ವಿಷಯಗಳ ಮೇಲೆ ಪ್ರಸ್ತುತ ಲೇಕನವು ಬೆಳಕು ಚೆಲ್ಲುತ್ತದೆ.

---

[1] ***ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಳಂದೂರು.***

ಹತ್ತನೇ ಚಾಮರಾಜ ಒಡೆಯರ ತರುವಾಯ ಅಧಿಕಾರಕ್ಕೆ ಬಂದ ನಾಲ್ವಡಿ ಕೃಷ್ಣರಾಜ ಒಡೆಯರು ಆಧುನಿಕ ಮೈಸೂರು ರಾಜ್ಯವನ್ನು ಆಳಿದ ದೊರೆಗಳಲ್ಲಿ ಪ್ರಸಿದ್ದರು. ಇವರ 45 ವರ್ಷಗಳ ಆಳ್ವಿಕೆ ಆಧುನಿಕ ಮೈಸೂರಿನ ಇತಿಹಾಸದಲ್ಲಿ ಒಂದು ಭವ್ಯ ಅಧ್ಯಾಯವಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರು ಅಧಿಕಾರಕ್ಕೆ ಬಂದಾಗ ಅವರಿಗೆ ಹತ್ತು ವರ್ಷ ವಯಸ್ಸು. ಮಹಾರಾಜರು ಇನ್ನು ಬಾಲಕರಾಗಿದ್ದುದ್ದರಿಂದ ಅವರು ಪ್ರಾಪ್ತ ವಯಸ್ಸಿಗೆ ಬರುವವರೆಗೆ ರಾಜಮಾತೆ ಕೆಂಪ ನಂಜಮ್ಮಣಿ, ವಾಣಿವಿಲಾಸ ಸನ್ನಿದಾನ ಅವರು ರಾಜಪ್ರತಿನಿಧಿಯಾಗಿ ಕಾರ್ಯನಿರ್ವಹಿಸಬೇಕೆಂದು ಕೇಳಿಕೊಳ್ಳಲಾಯಿತು. ಆ ಪ್ರಕಾರ ರಾಜಮಾತೆ ವಾಣಿವಿಲಾಸ ಸನ್ನಿದಾನ ರೀಜೆಂಟ್ ಆಗಿಯೂ, ಕೆ.ಶೇಷಾದ್ರಿ ಅಯ್ಯರ್ ದಿವಾನರಾಗಿಯೂ ನೇಮಕಗೊಂಡು, ರಾಜ್ಯದ ಆಡಳಿತ ಸುಗಮವಾಗಿ ಮುಂದುವರಿಯಿತು. ಮಹಾರಾಜ ನಾಲ್ವಡಿಯವರಿಗೆ 18 ವರ್ಷಗಳು ತುಂಬಿದ ನಂತರ ಬ್ರಿಟಿಷರು ರೀಜೆನ್ಸಿ ಆಡಳಿತವನ್ನು ರದ್ದು ಮಾಡಿ ಅವರಿಗೆ ಮೈಸೂರು ಸಂಸ್ಥಾನದ ಆಡಳಿತವನ್ನು ವಹಿಸಿಕೊಟ್ಟರು. 1902 ಆಗಸ್ಟ್ 8 ರಂದು ನಾಲ್ವಡಿಯವರು ಆಡಳಿತವನ್ನು ವಹಿಸಿಕೊಂಡರು. ಇವರ ಆಳ್ವಿಕೆಯ ಕಾಲದಲ್ಲಿ ಅತ್ಯಂತ ದಕ್ಷರಾದ ದಿವಾನರುಗಳು ಸೇವೆ ಸಲ್ಲಿಸಿದರು. ಅವರಲ್ಲಿ ಮುಖ್ಯರಾದವರೆಂದರೆ ಸರ್ ಕೆ. ಶೇಷಾದ್ರಿ ಅಯ್ಯರ್, ಪಿ.ಎನ್.ಕೃಷ್ಣಮೂರ್ತಿ, ವಿ.ಪಿ ಮಾಧವರಾವ್, ಬಿ.ಆನಂದರಾಯ, ಸರ್.ಎಂ.ವಿಶ್ವೇಶ್ವರಯ್ಯ, ಎಂ.ಕಾಂತರಾಜ ಅರಸ್, ಸರ್.ಮಿರ್ಜಾ ಇಸ್ಮಾಯಿಲ್ ಇವರೆಲ್ಲರ ದಕ್ಷ, ಸಮರ್ಥ ಮತ್ತು ಅನುಭವಿ ಸೇವೆಯ ಸಲುವಾಗಿ ಮೈಸೂರು ಸಂಸ್ಥಾನವು 'ಮಾದರಿ ರಾಜ್ಯ'ವೆಂಬ ಹೆಸರು ಗಳಿಸಿತು.

ನಾಲ್ವಡಿ ಕೃಷ್ಣರಾಜ ಒಡೆಯರು ಆಡಳಿತ ಸೂತ್ರ ವಹಿಸಿಕೊಂಡ ಬಳಿಕ ಆವರೆಗೆ ಅವರಿಗೆ ಮಾರ್ಗದರ್ಶಿಗಳಾಗಿದ್ದ ಎಸ್.ಎಂ ಫ್ರೇಜರ್ ತಮ್ಮ ದೇಶಕ್ಕೆ ಹಿಂದುರಿಗಿದರು. ಇಂತಹ ಸಂಧರ್ಭಗಳಲ್ಲಿ ಇ. ಮೆಕಾನಕಿ ಎಂಬ ಅಧಿಕಾರಿಯನ್ನು ಮಹಾರಾಜರ ಕಾರ್ಯದರ್ಶಿಯಾಗಿ ವೈಸರಾಯ್ ಕರ್ಜನ್ ನೇಮಿಸಿದರು. ನಂತರ ಮಹಾರಾಜರು ಪೂರ್ಣಕಾಲದ ಒಂದು ಮಂತ್ರಿಮಂಡಲವನ್ನು ರಚಿಸಿ ಅದಕ್ಕೆ ದಿವಾನರನ್ನು ಆಧ್ಯಕ್ಷರನ್ನಾಗಿ ಮಾಡಿದರು. ಈ ಮಂತ್ರಿಮಂಡಲ ರಾಜ್ಯದ ಆಡಳಿತ ನಡೆಸುತ್ತಿದ್ದರೂ ಮಹಾರಾಜರ ಒಪ್ಪಿಗೆ ಇಲ್ಲದೆ ಯಾವುದು ಜಾರಿಗೆ ಬರುವಂತಿರಲ್ಲಿಲ್ಲ. ನಾಲ್ವಡಿಯವರು ಯಾರ ದಾಕ್ಷಿಣ್ಯಕ್ಕೂ ಬೀಳದೆ ಯಾರ ಕೈಗೊಂಬೆಯೂ ಆಗದೆ, ಬುದ್ಧಿವಂತಿಕೆಯಿಂದ ರಾಜ್ಯಭಾರ ಮಾಡುವ ಸಾಮರ್ಥ್ಯ ಅವರಲ್ಲಿತ್ತು. ಆದುದರಿಂದ ತಾವು ಆಡಳಿತದ ಸೂತ್ರ ವಹಿಸಿದ ಒಂದು ವಾರದೊಳಗೆ ಮಹಾರಾಜರು ಒಂದು ವಿಶೇಷ ರೀತಿಯ ಸಭೆ ಕರೆದರು. ಆ ಸಭೆಯಲ್ಲಿ ದಿವಾನರು ಎಕ್ಸಿಕ್ಯೂಟಿವ್ ಕೌನ್ಸಿಲಿನ ಸದಸ್ಯರು ಅಧಿಕಾರಿಗಳು ಇದ್ದರು. ಈ ಸಭೆಯನ್ನು ಉದ್ದೇಶಿಸಿ ಮಹಾರಾಜರು "ನಮಗೆ ಈಗ ತಾನೇ ದೊರಕಿರುವ ಆಡಳಿತದ ಸೌಭ್ಯಾಗದ ಮೂಲಕ ನಮ್ಮ ಪ್ರಜೆಗಳ ಪ್ರಗತಿ ಸಾಧಿಸುವುದರಲ್ಲಿ ಯಾವ ವಿಳಂಬವನ್ನೂ ಮಾಡದೆ ತಕ್ಷಣ

ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯನಿರತರಾಗಬೇಕೆಂಬುವುದನ್ನು ನಿಮಗೆಲ್ಲಾ ತಿಳಿಸುವ ಇಚ್ಛೆಯಿಂದ ಈ ಸಭೆಯನ್ನು ಕರೆದಿರುವುದು ಮೊದಲನೆಯ ಉದ್ದೇಶವಾಗಿದೆ. ನಮ್ಮ ಸಂಸ್ಥಾನದ ದಿವಾನರು, ಕೌನ್ಸಿಲಿನ ಸದಸ್ಯರೂ, ಅಧಿಕಾರಿಗಳೂ ಪರಸ್ಪರ ಪರಿಚಯ ಮಾಡಿಕೊಳ್ಳಬೇಕು, ಅದು ಆದಷ್ಟು ಬೇಗ ಆಗಬೇಕೆಂಬುದು ಈ ಸಭೆ ಕರೆದ ಇನ್ನೊಂದು ಉದ್ದೇಶ" ಎಂದು ಹೇಳಿದರು. ಮಹಾರಾಜರು ಮುಂದುವರೆಸುತ್ತಾ "ಮೈಸೂರು ರಾಜ್ಯದ ಆಡಳಿತದಲ್ಲಿ ನಾವು ಒಂದು ಹೊಸ ಪ್ರಯೋಗ ಆರಂಭಿಸಿದ್ದೇವೆ. ಆ ಪ್ರಯೋಗದ ಸಫಲತೆ ನಿಮ್ಮೆಲ್ಲರನ್ನು ಅವಲಂಭಿಸಿದೆ. ನಮ್ಮ ಹೊಸ ಪ್ರಯೋಗ ವಿಫಲವಾಗದಂತೆ ನೋಡಿಕೊಳ್ಳಬೇಕಾಗಿದೆ. ಸಿಂಹಾಸನಕ್ಕೆ ನಿಷ್ಠೆ ತೋರಿಸುವ ನೀವೆಲ್ಲಾ ಸಂಸ್ಥಾನದ ಅಭಿವೃದ್ಧಿಯ ಚಿಂತನೆಯಲ್ಲಿರುವವರು ಎಂಬುದು ನನಗೆ ಗೊತ್ತು. ದೇವ ನಿರ್ಮಿತವಾದುದ್ದು ಮಾತ್ರ ಪರಿಪೂರ್ಣವಾಗಿರುತ್ತದೆ ಹೊರತು ಮಾನವ ನಿರ್ಮಿತ ಸಂಸ್ಥೆಗಳಲ್ಲಿ ಪರಿಪೂರ್ಣತೆ ಇದೆ ಎಂದು ಹೇಳಲು ಸಾಧ್ಯವಿಲ್ಲ. ಆದುದ್ದರಿಂದ ನಮ್ಮ ಹೊಸ ಆಡಳಿತದ ರೀತಿ ನೀತಿಗಳಲ್ಲಿ ನ್ಯೂನತೆಗಳು ಬರಬಹುದು. ಆದರೆ, ನಿಮ್ಮೆಲ್ಲರ ಸಹಕಾರದಿಂದ ಹಾಗೂ ನಮ್ಮ ಸ್ನೇಹಿತರಾದ ಬ್ರಿಟೀಷ್ ರೆಸಿಡೆಂಟ್ ಕರ್ನಲ್ ರಾಬರ್ಟ್‌ಸನ್ ಅವರ ಸಹಾಯದಿಂದ ಆಗಾಗ್ಗೆ ಕಂಡು ಬರುವ ನ್ಯೂನತೆಗಳನ್ನು ಸರಿಪಡಿಸಿಕೊಂಡು ನಮ್ಮ ಸಂಸ್ಥಾನದ ಹಿತ ಸಾಧಿಸುತ್ತೇವೆಂಬ ನಂಬಿಕೆ ನಮಗಿದೆ. ಆಡಳಿತ ನಿರ್ವಹಿಸುವಾಗ ನಿಮ್ಮ ನಿಮ್ಮಲ್ಲೇ ಚರ್ಚಿಸುವಾಗ ನಿಮ್ಮೊಳಗೆ ಭಿನ್ನಾಭಿಪ್ರಾಯಗಳು ಬರಬಹುದು. ಅಥವಾ ನಿಮ್ಮ ಸೂಚನೆಯನ್ನು ನಾವೇ ಪರಿಗಣಿಸದಿರಬಹುದು. ಇಂತಹ ಸಂಧರ್ಭಗಳಲ್ಲಿ ಯಾರೂ ನಿರಾಶರಾಗಬಾರದು, ವಿಷಾದಕ್ಕೆ ಎಡೆಮಾಡಿಕೊಡಬಾರದು. ಜನತೆಯ ಹಿತಸಾಧನೆ ಮಾಡುವಾಗ ಭಿನ್ನಭಿಪ್ರಾಯಗಳು ಸಹಜ. ಇತರರ ಅಭಿಪ್ರಾಯವನ್ನು ಸಹನೆಯನ್ನು ಅರ್ಥಮಾಡಿಕೊಂಡು ಅದರ ಕುರಿತು ನಿಮ್ಮ ಅಭಿಪ್ರಾಯವನ್ನು ತಿಳಿಸಿದರೆ ನಿಮ್ಮ ಕರ್ತವ್ಯ ನೀವು ಮಾಡಿದಂತಾಗುತ್ತದೆ. ನಿಮ್ಮ ಗೌರವವೂ ಉಳಿಯುತ್ತದೆ. ಅಲ್ಲದೆ ವಿಷಯಗಳನ್ನು ಶುದ್ಧ ಮನಸ್ಸಿನಿಂದ ಚರ್ಚೆಗೆ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಅನುಭವಿಗಳಾದ ನಿಮ್ಮಿಂದ ನಮ್ಮ ಸಂಸ್ಥಾನಕ್ಕೆ ನಿಮ್ಮ ಉತ್ತಮ ಸೇವೆ ಲಭಿಸುತ್ತದೆ. ನಿಮ್ಮ ಉತ್ತಮ ಕೆಲಸಗಳಿಗೆ ನಮ್ಮ ಉತ್ತೇಜನ ಖಂಡಿತ ಇದೆ. ಪ್ರಿಯರಾದ ನಮ್ಮ ಪ್ರಜೆಗಳಿಗೆ ಅಖಂಡವಾದ ಸುಖ ಸಂಪದವನ್ನು ಒದಗಿಸಿಕೊಡಬೇಕೆಂಬುವುದೇ ನಮ್ಮ ಜೀವನದ ಪರಮೋದ್ದೇಶ. ಇದನ್ನು ಸಾಧಿಸಲು ಪರಮಾತ್ಮನು ನಮ್ಮನ್ನು ಸದಾ ಸತ್ಪಥದಲ್ಲಿ ನಡೆಸಲಿ" ಎಂದರು. ನಾಲ್ವಡಿಯವರು ಅರಮನೆಯ ಒಂದು ಭಾಗವನ್ನು ತಮ್ಮ ಖಾಸಗಿ ಆಫೀಸಾಗಿ ಉಪಯೋಗಿಸಿಕೊಳ್ಳಲು ಆರಂಭಿಸಿದರು.

ದಿವಾನರು ಅಧ್ಯಕ್ಷರಾಗಿದ್ದು, ಅವರಿಗೆ ಸಹಾಯ ಮಾಡುವ ಇಬ್ಬರು ಮಂತ್ರಿಗಳು ಇರುವ ಮಂತ್ರಿಮಂಡಲವನ್ನು ರಚಿಸಿದರು. ಮಂತ್ರಿಮಂಡಲದ ತೀರ್ಮಾನವನ್ನು ಅರಸರ ಒಪ್ಪಿಗೆಗೆ ಕಳುಹಿಸಬೇಕಿತ್ತು. ಭಿನ್ನಾಭಿಪ್ರಾಯಗಳೂ ಇದ್ದಾಗಲೂ ಮಹಾರಾಜರಿಗೆ ತಿಳಿಸಬೇಕಿತ್ತು. ಮಂತ್ರಿಮಂಡಲ ಒಪ್ಪಿಗೆ ಕೊಟ್ಟಿದೆ ಎಂದ ಮಾತ್ರಕ್ಕೆ ಅರಸರು ಸಮ್ಮತಿ ಕೊಡಬೇಕಾಗಿರಲ್ಲಿಲ್ಲ. ಯಾವ

ಕಾನೂನು ರಚಿಸಬೇಕಾದರೂ ಅರಸರ ಒಪ್ಪಿಗೆ ಬೇಕಿತ್ತು. ಅರಸರು ಕೆಲವೊಮ್ಮೆ ತಾವೇ ನಿರೂಪ ಬರೆಯುತ್ತಿದ್ದರು. ತಮ್ಮ ಆಜ್ಞೆಗಳು ಸರಿಯಾಗಿ ಜಾರಿಯಾಗುತ್ತಿವೆಯೇ ಎಂಬುವುದನ್ನು ಪರಿಶೀಲಿಸುತ್ತಿದ್ದರು. ಯುವಕ ಮಹಾರಾಜರಿಗೆ ಉತ್ತಮ ರಾಜ್ಯಭಾರದಲ್ಲಿರುವ ಆಸಕ್ತಿಯನ್ನು ದಿವಾನರಾಗಿದ್ದ ಸರ್.ಪಿ.ಎನ್ ಕೃಷ್ಣಮೂರ್ತಿಯವರು 1903ರಲ್ಲಿ 'ಪ್ರಜಾಪ್ರತಿನಿಧಿ ಸಭೆ'ಯಲ್ಲಿ ಹೀಗೆ ಹೇಳಿದರು. "ಮಹಾರಾಜರು ತಮ್ಮ ಆಫೀಸಿಗೆ ಬೆಳಿಗ್ಗೆ ಹನ್ನೊಂದು ಗಂಟೆಗೆ ಬಂದು ಕಾಗದ ಪತ್ರಗಳನ್ನು ಪರಿಶೀಲಿಸಿ ಅದಕ್ಕೆ ತಕ್ಕ ಉತ್ತರ ಬರೆಯುವರು. ಆಡಳಿತ ವಹಿಸಿಕೊಂಡ ಮೊದಲನೆಯ ವರ್ಷದಲ್ಲಿ ಸರಕಾರದ ಆಡಳಿತಕ್ಕೆ ಸಂಬಂಧಪಟ್ಟ 900 ಪತ್ರಗಳಿಗೆ ತಿರ್ಪನ್ನು ಕೊಟ್ಟು ಆಜ್ಞೆ ಮಾಡಿರುತ್ತಾರೆ. ಕರ್ತವ್ಯನಿಷ್ಠರಾದ ನಮ್ಮ ಮಹಾರಾಜರು ಮಂತ್ರಿಗಳಿಗೆ ಅಧಿಕಾರಿ ವರ್ಗದವರಿಗೆ ಮಾರ್ಗದರ್ಶಕರಾಗಿದ್ದಾರೆ". ಕೆಲವು ವಿಷಯಗಳಲ್ಲಿ ದಿವಾನರ ಮತ್ತು ಮಂತ್ರಿಗಳ ಮಧ್ಯೆ ಭಿನ್ನಾಭಿಪ್ರಾಯಗಳು ಇರುವುದು ಸಹಜ ಎಂದು ತಿಳಿದಿದ್ದ ಮಹಾರಾಜರು ಅಂತಹ ಸಂಧರ್ಭಗಳಲ್ಲಿ ಬಹಳ ಕಟ್ಟುನಿಟ್ಟಾಗಿ ಪಕ್ಷಪಾತವಿಲ್ಲದೆ ವರ್ತಿಸುತ್ತಿದ್ದರು. ಪ್ರಾಮಾಣಿಕ ದಕ್ಷ ಅಧಿಕಾರಿಗಳನ್ನು ಹೊಣೆಗಾರಿಕೆಯ ಸ್ಥಾನಗಳಿಗೆ ತಾವೇ ಸ್ವತಃ ಪರಿಶೀಲಿಸಿ ನೇಮಿಸುತ್ತಿದ್ದು, ಅವರು ತಮ್ಮ ಜವಬ್ದಾರಿಯನ್ನು ಸರಿಯಾಗಿ ನಿರ್ವಹಿಸಲು ಬೆಂಬಲ ನೀಡುತ್ತಿದ್ದರು. ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಯೋಗ್ಯ, ದಕ್ಷ ಸರಕಾರಿ ನೌಕರರ ನೇಮಕ ಮಾಡುವ ವ್ಯವಸ್ಥೆ ಜಾರಿಗೆ ತಂದರು. ಪ್ರಮಾಣಿಕರ ವಿರುದ್ಧ ಸುಳ್ಳು ಅಪಾದನೆ ಹೊರಿಸುವವರು, ಅವರನ್ನು ಕಂಡು ಮತ್ಸರ ಪಡುವವರು ಇದ್ದೇ ಇರುತ್ತಾರೆ ಎಂಬ ಅರಿವಿದ್ದ ಮಹಾರಾಜರು ಎಂದೂ, ಯಾರ ಮಾತಿಗೆ ಕಿವಿಗೊಡುತ್ತಿರಲ್ಲಿಲ್ಲ. ಮಹಾರಾಜರು ಸಂಶಯ ಬಂದಲ್ಲಿ ತಾವೇ ಆ ಅಧಿಕಾರಿಗಳನ್ನು ಪರೀಕ್ಷಿಸಿ ಅವರ ಕೆಲಸಗಳನ್ನು ವೀಕ್ಷಿಸಿ ನಿರ್ಣಯಕ್ಕೆ ಬರುತ್ತಿದ್ದರು. ತಪ್ಪಿತಸ್ಥ ಅಧಿಕಾರಿಗೆ ತಮ್ಮ ತಪ್ಪಿನ ಅರಿವು ಮೂಡಿಸಿ, ಅವರು ತಮ್ಮನ್ನು ತಿದ್ದಿಕೊಳ್ಳುವಂತೆ ನೋಡಿಕೊಳ್ಳುತ್ತಿದ್ದರು. ಯೋಗ್ಯ ಅಧಿಕಾರಿಗಳನ್ನು ಹುರಿದುಂಬಿಸುತ್ತಿದ್ದರು, ಸನ್ಮಾನಿಸುತ್ತಿದ್ದರು. ಅದಕ್ಷ ಅಧಿಕಾರಿಗಳಿಗೆ ಮೃದು ಮಾತಿನಲ್ಲೇ ಎಚ್ಚರಿಕೆ ನೀಡುತ್ತಿದ್ದರು. ಒಮ್ಮೆ ಒಂದು ಘಟನೆ ನಡೆಯಿತು ಸರಿಯಾಗಿ ಕೆಲಸ ಮಾಡದ ಒಬ್ಬ ಅಧಿಕಾರಿಯನ್ನು ಕಂಡು ಮಹಾರಾಜರು "ನಿಮ್ಮ ಹೊಗಳಬೇಕೆಂಬ ಆಸೆ ನನಗೆ. ಆದರೆ ಅಂತಹ ಅವಕಾಶವನ್ನು ನೀವೇಕೆ ಮಾಡಿಕೊಡುವುದಿಲ್ಲ?"ಎಂದು ಹೇಳಿ ಆ ಅಧಿಕಾರಿಯೂ ತನ್ನನ್ನು ತಿದ್ದಿಕೊಳ್ಳುವಂತೆ ಮಾಡಿದರು. ಯಾವ ಸಮಾರಂಭಗಳಾಗಲೀ, ಕೆಲಸ ಕಾರ್ಯಗಳಾಗಲಿ, ಅವು ನಡೆದ ಬಳಿಕ ಅದರ ಯಶಸ್ಸಿಗೆ ಕಾರಣರಾದ ಅಧಿಕಾರಿಗಳಿಗೆ ಅವರು ಮಾಡಿದ ಕೆಲಸಗಳನ್ನು ಪ್ರಶಂಶಿಸಿ ಪತ್ರ ಬರೆಯುತ್ತಿದ್ದರು. ಆದರೆ ಯಾವ ಕೆಲಸ ಕಾರ್ಯಗಳು ನಡೆಯಬೇಕಾದರೂ ಮಹಾರಾಜರ ಮಾರ್ಗದರ್ಶನ ಇದ್ದೇ ಇರುತ್ತಿತ್ತು. ತಾವು ಕೊಟ್ಟ ಆಜ್ಞೆಯನ್ನು ಎಂದೂ ಮಹಾರಾಜರೂ ತಾವೇ ಉಲ್ಲಂಘಿಸುತ್ತಿರಲ್ಲಿಲ್ಲ. ಎಲ್ಲಾ ಪ್ರಜೆಗಳಂತೆ ಆ ಆಜ್ಞೆ ತಮಗೂ ಅನ್ವಯಿಸುತ್ತದೆ ಎನ್ನುತ್ತಿದ್ದ ಅರಸರು, ನೌಕರರು ಎಂದೂ

ಸರಕಾರದ ಆಜ್ಞೆಯನ್ನು ಉಲ್ಲಂಘಿಸಿ ತಮಗೆ ಅನುಕೂಲ ಮಾಡಿಕೊಡಲು ಒಪ್ಪುತ್ತಿರಲ್ಲಿಲ್ಲ. ಅಲ್ಲದೆ ಶಿಸ್ತನ್ನು ಪಾಲಿಸುವ ನೌಕರರನ್ನು ತುಂಬಾ ಮೆಚ್ಚಿಕೊಳ್ಳುತ್ತಿದ್ದರು.

**ನಾಲ್ವಡಿ ಕೃಷ್ಣರಾಜ ಒಡೆಯರ ಆಡಳಿತ ವ್ಯವಸ್ಥೆ**

ಮೈಸೂರು (ಆಶ್ರಿತ) ಸಂಸ್ಥಾನಗಳಲ್ಲಿ ಒಂದಾಗಿ ಬ್ರಿಟಿಷ್ ಸಾರ್ವಭೌಮರ ಮೇಲ್ವಿಚಾರಣೆಯಲ್ಲಿದ್ದರೂ ಮೈಸೂರಿನ ಆಡಳಿತಕ್ಕೆ ಮಹಾರಾಜರೇ ಮುಖ್ಯ ಪ್ರಭುಗಳಾಗಿದ್ದರು. ಪ್ರಭುಗಳೇ ಸರ್ಕಾರ ಹಾಗೂ ಸಕಲ ಅಧಿಕಾರಿಗಳನ್ನು ನೇಮಿಸುತ್ತಿದ್ದರು. ದೇಶದ ಏಳಿಗೆ, ಕಾನೂನು, ನ್ಯಾಯ, ರಾಜಕೀಯ ಆಡಳಿತದ ಕಾರ್ಯನೀತಿ ಸುಧಾರಣೆ ಎಲ್ಲದಕ್ಕೂ ಅವರೇ ಮೂಲ ಹಾಗೂ ಆಶ್ರಯದಾತರಾಗಿದ್ದರು. ಆದುದರಿಂದ ಮೈಸೂರಿನ ಸರ್ಕಾರಕ್ಕೆ 'ಮಹಾರಾಜರ ಸರ್ಕಾರ'ವೆಂದೆ ಹೆಸರಿತ್ತು. ಸರ್ಕಾರದ ಕೆಲಸವೆಲ್ಲವೂ ಮಹಾರಾಜರ ಹೆಸರಿನಲ್ಲಿಯೇ ನಡೆಯುತ್ತಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರು ರಾಜ್ಯಕ್ಕೆ ಸರ್ವಾಧಿಕಾರಿಯಾಗಿದ್ದರೂ ಎಂದು ಸರ್ವಾಧಿಕಾರಿಯಾಗಿ ನಡೆದುಕೊಳ್ಳಲ್ಲಿಲ್ಲ.

**ಕೇಂದ್ರಾಡಳಿತ**

ಮೈಸೂರು ಸಂಸ್ಥಾನ ಬ್ರಿಟಿಷರ ಪರೋಕ್ಷ ಆಳ್ವಿಕೆಗೆ ಒಳಪಟ್ಟಿದ್ದರೂ ನಾಲ್ವಡಿಯವರು ಆಡಳಿತದ ಕೇಂದ್ರಬಿಂದುವಾಗಿದ್ದರು. ಒಳಾಡಳಿತವೆಲ್ಲವೂ ಅವರ ಹೆಸರಿನಲ್ಲಿ ನಡೆಯುತ್ತಿದ್ದುದರಿಂದ ಮಹರಾಜರೇ ಸರ್ಕಾರವಾಗಿದ್ದರು. ಇಂಗ್ಲೆಂಡಿನ ದೊರೆಯು ಹೆಸರಿಗೆ ಪ್ರಭು, ಮೈಸೂರಿನ ಮಹಾರಾಜರು ಹೆಸರು ಹಾಗೂ ಅಧಿಕಾರಗಳೆರಡನ್ನು ಪಡೆದ ಪ್ರಭುಗಳಾಗಿದ್ದರು. ಸಕಲಾಧಿಕಾರಿಗಳನ್ನು, ನ್ಯಾಯ ಮೂರ್ತಿಗಳನ್ನು ನೇಮಕ ಮಾಡುವ ಮತ್ತು ಕಾನೂನುಗಳನ್ನು ಜಾರಿಗೆ ತರುವ ಅಧಿಕಾರ ಅವರದಾಗಿತ್ತು. ಕೇಂದ್ರಾಡಳಿತವನ್ನು ಸಂಸ್ಥಾನದ ಆಡಳಿತ, ಅರಮನೆ ಆಡಳಿತವೆಂದು ಎರಡು ಭಾಗಗಳಾಗಿ ವಿಂಗಡಿಸಲಾಗಿತ್ತು. ಮಹರಾಜರ ಹೆಸರಿನಲ್ಲೇ ಆಡಳಿತ ನಡೆಯುತ್ತಿದ್ದರೂ ಎರಡು ಆಡಳಿತಗಳು ಪ್ರತ್ಯೇಕವಾಗಿದ್ದವು. ಮೈಸೂರು ನಗರ ರಾಜಧಾನಿಯಾದರೂ ಬೆಂಗಳೂರು ಆಡಳಿತ ಕೇಂದ್ರವಾಗಿತ್ತು. ಮಹರಾಜರು ಮೈಸೂರಿನಲ್ಲೇ ಇದ್ದುಕೊಂಡು ಆಡಳಿತ ಕಾರ್ಯಗಳಿಗಾಗಿ ಬೆಂಗಳೂರು ಮತ್ತು ಮೈಸೂರುಗಳ ನಡುವೆ ಪ್ರವಾಸವನ್ನು ಕೈಗೊಳ್ಳುತ್ತಿದ್ದರು.

**ಕಾರ್ಯಾಂಗ**

ಮಹರಾಜರೇ ಕಾರ್ಯಾಂಗದ ಮುಖ್ಯಸ್ಥರಾಗಿದ್ದರು. ಅವರಿಗೆ ಆಡಳಿತದಲ್ಲಿ ನೆರವಾಗಲು ಕಾರ್ಯನಿರ್ವಾಹಕ ಸಭೆ ಅಸ್ತಿತ್ವದಲ್ಲಿತ್ತು. ದಿವಾನರ ಅಧ್ಯಕ್ಷತೆಯಲ್ಲಿ ಇಬ್ಬರು ಅಥವಾ ಮೂವರು ಸದಸ್ಯರನ್ನು ಹೊಂದಿದ್ದು ಕಾರ್ಯನಿರ್ವಾಹಕ ಸಭೆ ಪೂರ್ಣ ಕಾಲದ ಮಂತ್ರಿಮಂಡಲವಾಗಿತ್ತು. ಮಹಾರಾಜರ ನಂತರ ಹೆಚ್ಚಿನ ಅಧಿಕಾರ ಹೊಂದಿದವರು ದಿವಾನರು. ಇವರಿಗೆ ಎಲ್ಲಾ ಇಲಾಖೆಯ

ಮೇಲ್ವಿಚಾರಣೆಯ ಅಧಿಕಾರವಿತ್ತು. ಇಲಾಖೆಗಳನ್ನು ಕಾರ್ಯ ನಿರ್ವಾಹಕ ಸಭೆಯ ಸದಸ್ಯರಾದ ಮಂತ್ರಿಗಳು ತಮ್ಮಲ್ಲಿ ಹಂಚಿಕೊಂಡು ಕಾರ್ಯನಿರ್ವಹಿಸುತ್ತಿದ್ದರು.

ದಿವಾನರ ಅಧ್ಯಕ್ಷತೆಯಲ್ಲಿ ಈ ಸಭೆ ಬೆಂಗಳೂರಿನಲ್ಲಿ ವಾರಕೊಮ್ಮೆಯಾದರೂ ಸೇರುತ್ತಿತ್ತು. ಮುಖ್ಯ ಕಾರ್ಯದರ್ಶಿ ಅದರಲ್ಲಿ ಭಾಗವಹಿಸುತ್ತಿದ್ದರು. ಕಾರ್ಯನಿರ್ವಾಹಕ ಸಭೆ ಮಂತ್ರಾಲೋಚನಾ ಸಭೆ ಮಾತ್ರವಾಗಿತ್ತು. ಅದರಲ್ಲಿ ಆದ ತಿರ್ಮಾನಗಳನ್ನು ಮಹರಾಜರ ಒಪ್ಪಿಗೆಗೆ ಕಳುಹಿಸಬೇಕಾಗಿತ್ತು. ಮಹಾರಾಜರ ಒಪ್ಪಿಗೆ ಇಲ್ಲದೆ ಕಾನೂನು ರಚನೆ, ಹೊಸ ತೆರಿಗೆ ವಿಧಿಸುವ ಅಥವಾ ತೆರಿಗೆಯನ್ನು ತೆಗೆದು ಹಾಕುವ ಕಾರ್ಯವನ್ನು ಮಾಡುವಂತಿರಲ್ಲಿಲ್ಲ. ಅದರ ಮೇಲೆ ಮಹಾರಾಜರ ಪೂರ್ಣ ಹತೋಟಿ ಇತ್ತು.

**ಶಾಸಕಾಂಗ**

ಮಹಾರಾಜರು, ದಿವಾನ್ ಮತ್ತು ಕಾರ್ಯನಿರ್ವಾಹಕ ಸಭೆ ಹಾಗೂ ಸೆಕ್ರೆಟರಿಯೆಟ್‌ಗಳು ಸಂಸ್ಥಾನದಲ್ಲಿ ಕಾರ್ಯಾಂಗದ ಕೆಲಸವನ್ನು ನಿರ್ವಹಿಸುತ್ತಿದ್ದರು. 1907ರವರೆಗೆ ಕಾರ್ಯನಿರ್ವಾಹಕ ಸಭೆ ಮಹಾರಾಜರ ಅನುಮತಿಯನ್ನು ಪಡೆದು ಕಾನೂನುಗಳನ್ನು ರಚಿಸಿ ಅವುಗಳನ್ನು ಆಚರಣೆಗೆ ತರುತ್ತಿತ್ತು. 1907ರಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್‌ನ (ನ್ಯಾಯ ವಿಧಾಯಕ ಸಭೆ) ಸ್ಥಾಪನೆಯೊಂದಿಗೆ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಶಾಸಕಾಂಗಕ್ಕೆ ಅಡಿಪಾಯ ಹಾಕಲಾಯಿತು.

**ನ್ಯಾಯ ವಿಧಾಯಕ ಸಭೆ**

ನ್ಯಾಯ ವಿಧಾಯಕ ಸಭೆ 1907 ರಲ್ಲಿ ಅಸ್ತಿತ್ವಕ್ಕೆ ಬಂದಿತು. ದಿವಾನರು ಒಟ್ಟು 60 ಸದಸ್ಯರನ್ನು ಹೊಂದಿದ್ದು ವರ್ಷಕ್ಕೆ 2 ಬಾರಿ ಬೆಂಗಳೂರಿನಲ್ಲಿ ಸಭೆ ಸೇರುತ್ತಿತ್ತು. ರಾಜ್ಯದ ಆಯವ್ಯಯ ಪಟ್ಟಿಯ ವಿಮರ್ಶೆ, ಆಡಳಿತಕ್ಕೆ ಸಂಬಂಧಪಟ್ಟ ಪ್ರಶ್ನೆಗಳು ಚರ್ಚಿಸಲ್ಪಡುತ್ತಿದ್ದವು. ಪ್ರತಿಯೊಂದು ವಿಧವಾದ ಕಾನೂನುಗಳು ರಾಜ್ಯದಲ್ಲಿ ಆಚರಣೆ ಬರುವುದಕ್ಕೆ  ಮೊದಲು ಸಭೆಯ ಅನುಮತಿಯನ್ನು ಪಡೆಯುತ್ತಿದ್ದರು.

**ನ್ಯಾಯಾಂಗ**

ಮಹಾರಾಜರು ನ್ಯಾಯಾಂಗದ ಮುಖ್ಯಸ್ಥರಾಗಿದ್ದರು. ನ್ಯಾಯ ತಿರ್ಮಾನದಲ್ಲಿಯೂ ಇವರಿಗೆ ಎಲ್ಲರಿಗಿಂತಲೂ ಮೇಲ್ಮಟ್ಟದ ಅಧಿಕಾರವಿತ್ತು. ನ್ಯಾಯಾಧಿಪತಿಗಳನ್ನು ಮಹಾರಾಜರೇ ನೇಮಿಸುತ್ತಿದ್ದರು. ಸಿವಿಲ್ ಮತ್ತು ಕ್ರಿಮಿನಲ್ ವ್ಯವಹಾರಗಳಿಗಾಗಿ ಪ್ರತ್ಯೇಕವಾದ ಅಧೀನ ಕೋರ್ಟ್‌ಗಳಿದ್ದವು. ಬೆಂಚ್, ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಲಯಗಳು ಸಿವಿಲ್ ಮತ್ತು ಕ್ರಿಮಿನಲ್ ವ್ಯವಹಾರಗಳನ್ನು ಬಗೆಹರಿಸ ನ್ಯಾಯ ತಿರ್ಮಾನ ಮಾಡುತ್ತಿದ್ದವು. ಈ ನ್ಯಾಯಾಲಯಗಳಲ್ಲಿ ಸರಿಯಾದ ನ್ಯಾಯ ದೊರಕದಿದ್ದರೆ ಸೆಂಟ್ರಲ್ ಮತ್ತು ಹೈಕೋರ್ಟ್‌ಗಳಿಗೆ

ಅಪೀಲು ಸಲ್ಲಿಸಿ ನ್ಯಾಯ ಪಡೆಯಬಹುದಾಗಿತ್ತು. ಮೈಸೂರು ಸಂಸ್ಥಾನದ ಹೈಕೋರ್ಟ್ ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿತು.

**ಅರಮನೆ ಆಡಳಿತ**

ಅರಮನೆ ಆಡಳಿತ ಮಹಾರಾಜರ ನೇರವಾದ ಹತೋಟಿ ಮತ್ತು ಉಸ್ತುವಾರಿಯಲ್ಲಿತ್ತು. ಅರಮನೆ ಆಡಳಿತಕ್ಕೆ ರಾಜ ಸ್ಥಾನ, ಅರಮನೆ ಉಸ್ತುವಾರಿ, ರಾಜಮನೆತನ ಮತ್ತು ಪರಿಹಾರದ ಸೇನಾ ಸಿಬ್ಬಂದಿ, ಅರಮನೆ ಆಸ್ತಿ ನಿರ್ವಹಣೆ ಮುಂತಾದವು ಒಳಪಟ್ಟಿದ್ದವು. ಅರಮನೆಯಲ್ಲಿ ಕೆಲಸ ಮಾಡುವವರಿಗೆ ತಿಂಗಳಿಗೆ 4 ರೂಪಾಯಿ ಸಂಬಳ ನಿಗಧಿಯಾಗಿತ್ತು. ಅರಮನೆ ಆಡಳಿತಕ್ಕೆ ಸಂಬಂಧಿಸಿದ 12 ಇಲಾಖೆಗಳು ಈ ಕೆಳಕಂಡಂತಿದ್ದವು.

ಅರಮನೆ ದಪ್ತರ್, ಕಿಲ್ಲೆ ಕಛೇರಿ, ಜಿಲ್ಲಾ ಕಛೇರಿ, ಚಾಮುಂಡಿ ತೊಟ್ಟಿ, ಅವಸರದ ಹೋಬಳಿ, ಸಮ್ಮುಖದ ಊಳಿಗೆ (ಖಾನಿ), ಸಮ್ಮುಖದ ಊಳಿಗೆ (ಜನಾನಾ), ಅಶ್ವಶಾಲಾ –ಗಜಶಾಲೆ, ಕರೋಹಟ್ಟಿ, ಮರಾಮರ್, ತೋಟಗಾರಿಕೆ ಮತ್ತು ಸಾಮಾನ್ಯಾ ಇಲಾಖೆ ಅರಮನೆ ಆಡಳಿತ ಸೇವಾ ಸಿಬ್ಬಂದಿಯ ಸಂಖ್ಯೆ ಸಾವಿರವಿತ್ತು. 1918 ರಲ್ಲಿ ಮೊದಲು ಅರಮನೆ ಆಡಳಿತದಲ್ಲಿ 9,687 ಸಿಬ್ಬಂದಿ ವರ್ಗದವರಿದ್ದು ಅವರ ಒಂದು ತಿಂಗಳ ಸಂಬಳ 57,452 ರೂ.ಗಳು. ಅರಮನೆ ನೌಕರರನ್ನು ನೇಮಿಸುವ ಅಥವಾ ವಜಾ ಮಾಡುವ ಸಂಪೂರ್ಣ ಅಧಿಕಾರ ಮಹರಾಜರಿಗೆ ಸೇರಿತ್ತು. ಸೇವಾ ಸಿಬ್ಬಂದಿಗೆ ಕೆಲವು ಸೇವಾ ನಿಯಮಗಳೊಂದಿಗೆ ಅನೇಕ ಸೌಲಭ್ಯಗಳು ಇದ್ದವು. ನಿವೃತ್ತಿ ಧನ, ನಿವೃತ್ತಿ ವೇತನ, ಜೀವನಾಂಶ, ಸಹಾಯಧನ, ಅನುಕಂಪದ ಮೇಲೆ ನೇಮಕಾತಿ ಮುಂತಾದ ಸೌಲಭ್ಯಗಳು ಸಿಬ್ಬಂದಿ ವರ್ಗದ ಹಿತರಕ್ಷಣೆಯಾಗಿತ್ತು.

**ವಿಭಾಗಾಡಳಿತ**

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಕೇಂದ್ರಾಡಳಿತದ ಮಾದರಿಯಲ್ಲೇ ವಿಭಾಗಾಡಳಿತವನ್ನು ರೂಪಿಸಲಾಯಿತು. ಕಮೀಷನರ್ ಬೌರಿಂಗ್‌ನ ಆಡಳಿತ ಅಸ್ತಿತ್ವಕ್ಕೆ ತಂದಿದ್ದ 3 ಆಡಳಿತ ವಿಭಾಗಗಳನ್ನು 8 ಜಿಲ್ಲೆಗಳನ್ನಾಗಿ ವಿಭಾಗಿಸಲಾಯಿತು. ಮಂಡ್ಯ ಜಿಲ್ಲೆಯ ರಚನೆಯಿಂದಾಗಿ ಜಿಲ್ಲೆಗಳ ಸಂಖ್ಯೆ 9 ಆಗಿತ್ತು. ಪ್ರತಿ ಜಿಲ್ಲೆಯನ್ನು ಸಬ್ ಡಿವಿಸನ್, ತಾಲೂಕು, ಹೋಬಳಿ ಮತ್ತು ಗ್ರಾಮಗಳಾಗಿ ವಿಂಗಡಿಸಲಾಯಿತು. ಜಿಲ್ಲೆಯ ಆಡಳಿತಾಧಿಕಾರಿಯಾಗಿ ಡೆಪ್ಯೂಟಿ ಕಮೀಷನರ್ ನೇಮಕವಾದರು. ಇವರು ಕಂದಾಯ ಮತ್ತು ಆಡಳಿತಾಧಿಕಾರಿಯಾಗಿದ್ದರು. ತಾಲೂಕಿನ ಆಡಳಿತವನ್ನು ಅಮಲ್ದಾರ್ ನೋಡಿಕೊಳ್ಳುತ್ತಿದ್ದರು. ಪ್ರತಿ ತಾಲೂಕನ್ನು ಹೋಬಳಿಗಳಾಗಿ ವಿಂಗಡಿಸಿ ಅವುಗಳ ಮೇಲ್ವಿಚಾರಣೆಯನ್ನು ಶೇಖ್‌ದಾರ್‌ನಿಗೆ ವಹಿಸಲಾಯಿತು. ಗ್ರಾಮ ಆಡಳಿತವನ್ನು ಪಟೇಲ ಮತ್ತು ಶಾನುಭೋಗ ನೋಡಿಕೊಳ್ಳುತ್ತಿದ್ದರು. ಗ್ರಾಮಾಡಳಿತವನ್ನು ಗ್ರಾಮ ಪಂಚಾಯಿತಿಯು

ನಿರ್ವಹಿಸುತ್ತಿತ್ತು. ನಾಲ್ವಡಿಯವರ ಆಳ್ವಿಕೆಯಲ್ಲಿ ಪ್ರಜಾಸತ್ತಾತ್ಮಕವಾದ ಡಿಸ್ಟ್ರಿಕ್ ಬೋರ್ಡ್, ಮುನಿಸಿಪಾಲಿಟಿ ಮತ್ತು ಗ್ರಾಮ ಪಂಚಾಯಿತಿಗಳು ಸ್ಥಳಿಯ ಸರ್ಕಾರದಲ್ಲಿ ಸಕ್ರಿಯವಾದ ಪಾತ್ರವನ್ನು ವಹಿಸಿ ಆಡಳಿತದಲ್ಲಿ ದಕ್ಷತೆ ಮತ್ತು ಆರ್ಥಿಕ ಪ್ರಗತಿಗೆ ಸಹಾಯಕವಾಗಿದ್ದವು.

**ಪ್ರಜಾಪ್ರತಿನಿಧಿಯ ಸ್ಥಾಪನೆ**

1881ರಲ್ಲಿ ಚಾಮರಾಜ ಒಡೆಯರು ದಿವಾನ ಸಿ.ರಂಗಚಾರ್ಲುರವರ ಸಲಹೆಯ ಮೇರೆಗೆ ಪ್ರಜಾಪ್ರತಿನಿಧಿಯನ್ನು ಸ್ಥಾಪಿಸಿದರು. ಈ ಪ್ರಜಾಪ್ರತಿನಿಧಿ ಸಭೆ ರೈತರ ವರ್ತಕರ ಪ್ಲಾಂಟೆಷನ್ ಮಾಲೀಕರ ಮತ್ತು ಇತರೆ ವರ್ಗದ ಪ್ರತಿನಿಧಿಗಳಿಂದ ಕೂಡಿದ್ದಿತು. ನಾಲ್ವಡಿಯವರು ಜನಪ್ರತಿನಿಧಿಗಳನ್ನು ಸಮೀಪ ಇಟ್ಟುಕೊಂಡು ಆಡಳಿತ ನಡೆಸುವುದರಿಂದ ಜನರ ಸುಖ ದುಃಖಗಳನ್ನು ತಿಳಿಯಲು ಸಾಧ್ಯವಾಗುವುದಲ್ಲದೆ, ಅವರ ವಿಶ್ವಾಶವನ್ನು ಗಳಿಸಲು ಅವಕಾಶವಾಗುತ್ತದೆಂದು ಭಾವಿಸಿದ್ದರು. ಈ ಪ್ರತಿನಿಧಿಗಳನ್ನು ಸರ್ಕಾರವು ನೇಮಿಸುತ್ತಿತ್ತು. 1891 ರಿಂದ ಹಂತ ಹಂತವಾಗಿ ಚುನಾವಣೆಯ ಮೂಲಕ ಆರಿಸುವ ವ್ಯವಸ್ಥೆಯನ್ನುಜಾರಿಗೆ ತರಲಾಯಿತು. ಅಧಿಕಾರೇತರ ನಾಗರೀಕರನ್ನು ಸಮಿತಿಗಳಿಗೆ ಸೇರಿಸಲು ಪರೋಕ್ಷವಾಗಿ ಕೋರಿಕೆ ಸಲ್ಲಿಸತೊಡಗಿದರು. ಇದರ ಪರಿಣಾಮವಾಗಿ 1892 ರಿಂದ ಪುರಸಭಾ ಸಮಿತಿಗಳಿಗೆ ಅರ್ಧದಷ್ಟು ಸದಸ್ಯರು ಚುನಾವಣೆಯ ಮೂಲಕ ಆಯ್ಕೆಯಾಗಲು ಅವಕಾಶ ಕಲ್ಪಿಸಲಾಯಿತು. ತೆರಿಗೆದಾರರು ಸದಸ್ಯರನ್ನು ಆರಿಸುವ ಹಕ್ಕನ್ನು ಪಡೆದರು. ಮತದಾನದ ಅಧಿಕಾರ ಕೇಲವೇ ವರ್ಗಕ್ಕೆ ಸೀಮಿತವಾಗಿತ್ತು. ಇದನ್ನು ಗಮನಿಸಿ 1918 ರಲ್ಲಿ ಹಿಂದೆ ಇದ್ದ ಕಠಿಣ ಪದ್ಧತಿಗೆ ಮಾರ್ಪಾಡು ಮಾಡಿ ರೂ.50ರ ಭೂಕಂದಾಯ ಅಥವಾ 10 ರೂಪಾಯಿಗಳ ವಾಣಿಜ್ಯ ತೆರಿಗೆ ಪಾವತಿ ಆಧಾರದ ಮೇಲೆ ಮತದಾರರ ಅರ್ಹತೆಯನ್ನು ನಿಗಧಿಗೊಳಿಸಿದರು. 1881 ರಲ್ಲಿ ಪುರಸಭೆಗಳ ಸಂಖ್ಯೆ 83 ಇದ್ದದು, 1904ರ ವೇಳೆಗೆ ಅವುಗಳ ಸಂಖ್ಯೆ 125ಕ್ಕೆ ಏರಿತು. 1923ರ ಪ್ರಜಾಪ್ರತಿನಿಧಿ ಶಾಸನದ ಮೂಲಕ ಈ ಸಭೆಯ ಸದಸ್ಯರ ಸಂಖ್ಯೆಯನ್ನು 285 ರಿಂದ 250ಕ್ಕೆ ಇಳಿಸಿದರೂ ಪರೋಕ್ಷವಾಗಿ ಚುನಾಯಿತರಾಗುತ್ತಿದ್ದ ಸದಸ್ಯರ ಸಂಖ್ಯೆ ಕಡಿಮೆಯಾಯಿತು. ಶೋಷಿತ ವರ್ಗಗಳು ಮತ್ತು ಅಲ್ಪಸಂಖ್ಯಾತರಿಗೆ ಕ್ರಮವಾಗಿ 15 ಹಾಗೂ 35 ಸ್ಥಾನಗಳನ್ನು ಮೀಸಲೀಡಲಾಯಿತು. ಗ್ರಾಮಾಂತರ ಪ್ರದೇಶದಿಂದ 163 ಅಭ್ಯರ್ಥಿಗಳ ಆಯ್ಕೆಗೆ ಅವಕಾಶ ಕಲ್ಪಿಸಲಾಯಿತು.

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ ರಾಜ ಮಹಾರಾಜರು ಅನುಭವಿಸುತ್ತಿದ್ದ ಅಧಿಕಾರದಲ್ಲಿ ಪ್ರಜಾಪ್ರತಿನಿಧಿಗಳು ಭಾಗವಹಿಸುವಂತೆ ಮಾಡಿ ಆಡಳಿತವನ್ನು ಜನರ ಹತ್ತಿರ ಕೊಂಡೊಯ್ದು ನೈಜ ಪ್ರಜಾಪ್ರಭುತ್ವವಾದಿ ನಾಲ್ವಡಿ ಕೃಷ್ಣರಾಜ ಒಡೆಯರು. ಸರ್ ವಿಲಿಯಂ ಬಾರ್ಟನ್ ಮಹಾರಾಜರ

ಆಡಳಿತದ ಕುರಿತು ಹೇಳುತ್ತಾ “ತಮ್ಮ ಪ್ರಜೆಗಳ ಸುಖ ಸಂಪತ್ತನ್ನು ಹೆಚ್ಚಿಸಿ, ಅವರ ಜೀವನದಲ್ಲಿ ನೆಮ್ಮದಿಯನ್ನು ತರುವುದೇ ಮಹಾರಾಜರ ಪರಮ ಧ್ಯೇಯವಾಗಿದೆ”. ಆಡಳಿತದ ವಿಕೇಂದ್ರೀಕರಣವು ನಾಲ್ವಡಿಯವರ ಆಳ್ವಿಕೆಯ ಕಾಲಾವಧಿಯಲ್ಲಿ ಉನ್ನತ ಮಟ್ಟದಲ್ಲಿದ್ದು ಪ್ರಜೆಗಳೆಲ್ಲರೂ ಪ್ರಜಾಪ್ರಭುತ್ವ ವ್ಯವಸ್ಥೆಯ ಕಡೆಗೆ ತಮ್ಮ ಒಲವನ್ನು ತೋರಿದ್ದರು.

**ಪರಾಮರ್ಶನ/ಆಕರ ಗ್ರಂಥಗಳು**


- ನಾಗರಾಜು ಎಸ್. (2011). ಪ್ರಗತಿ ಪಥ. ಜ್ಯೋತಿ ಪ್ರಕಾಶನ, ಮೈಸೂರು.
- ರಾಮಲಿಂಗಪ್ಪ. (2006). ಸಮಗ್ರ ಕರ್ನಾಟಕ ಇತಿಹಾಸ. ಕಲಾ ಪ್ರಕಾಶನ, ಬೆಂಗಳೂರು
- ಸೇವಂತಿ ಡಿ. ರೈ. (2011). ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್. ಸಂವಹನ, ಮೈಸೂರು.
- Gopal M.H. (2001). History of Mysore State’ Vol-1 Jupiter Books, Bangalore.
- Rama Jois M. (1984). Legal and constitutional history of India: ancient legal, judicial and constitutional system. Universal law publication, Delhi
- Shyamarao S. (1936). Modern Mysore’. Vol 1-2. Mysore University, Mysore.
- Suryanath Kamath. (2001). The Concise History of Karnataka. Jupiter Books, Bangalore.


IIMRD JOURNALS